**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ 'ಡಿ'ಸೋಜಾ, ಶ್ರೀ ಬಸನಗೌಡ ಬಾದರ್ಲಿ ಹಾಗೂ ಶ್ರೀ ಕೇಶವ ಪ್ರಸಾದ್ ರವರುಗಳು ನಿಯಮ-330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ ಒದಗಿಸುವ ಕುರಿತು**

---

**ವಿಷಯ:** ಕರಾವಳಿ ಕರ್ನಾಟಕ, ರಾಯಚೂರು ಜಿಲ್ಲೆ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಡ್ರಗ್ಸ್ ಸೇವನೆಗೆ ಯುವಕರು ಮತ್ತು ಮಕ್ಕಳು ತೊಡಗಿಸಿಕೊಂಡು ಇಸ್ಪೀಟು, ಮಟ್ಕದಂತಹ ಅಪರಾಧ ಕೃತ್ಯಗಳಲ್ಲಿ ಕೈಜೋಡಿಸುತ್ತಿರುವುದರಿಂದ ಯುವಜನತೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಕುರಿತು.

**ಉತ್ತರ:**

ಕರಾವಳಿ ಭಾಗದಲ್ಲಿ ಡ್ರಗ್ಸ್ ಪೆಡ್ಲರ್‌ಗಳು, ಡ್ರಗ್ಸ್ ಸರಬರಾಜು ಮಾಡುವವರ ವಿರುದ್ಧ ಎನ್.ಡಿ.ಪಿ.ಎಸ್ ಕಾಯ್ದೆ-1985ರಡಿಯಲ್ಲಿ ನಿಯಮಾನುಸಾರ ಕ್ರಮಕೈಗೊಂಡು ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ:-

**2023**

| ಕ್ರ. ಸಂ | ಘಟಕ | ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | | ದಸ್ತಗಿರಿಯಾದ ಉತ್ಪಾದಕರ ಸಂಖ್ಯೆ | ದಸ್ತಗಿರಿಯಾದ ಮಾರಾಟಗಾರರ ಸಂಖ್ಯೆ | ದಸ್ತಗಿರಿಯಾದ ವ್ಯಸನಿಗಳ ಸಂಖ್ಯೆ |
|---|---|---|---|---|---|---|---|
| | | | ಭಾರತೀಯರು | ವಿದೇಶಿಯರು | | | |
| 1 | ಮಂಗಳೂರು ನಗರ | 713 | 942 | 06 | 0 | 199 | 749 |
| 2 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | 66 | 85 | 0 | 0 | 29 | 56 |
| 3 | ಉತ್ತರ ಕನ್ನಡ ಜಿಲ್ಲೆ, ಕಾರವಾರ | 101 | 154 | 0 | 0 | 54 | 100 |
| 4 | ಉಡುಪಿ ಜಿಲ್ಲೆ | 272 | 307 | 0 | 0 | 60 | 247 |
| | **Total** | **1152** | **1488** | **6** | **0** | **342** | **1152** |

**2024**

| ಕ್ರ. ಸಂ | ಘಟಕ | ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | | ದಸ್ತಗಿರಿಯಾದ ಉತ್ಪಾದಕರ ಸಂಖ್ಯೆ | ದಸ್ತಗಿರಿಯಾದ ಮಾರಾಟಗಾರರ ಸಂಖ್ಯೆ | ದಸ್ತಗಿರಿಯಾದ ವ್ಯಸನಿಗಳ ಸಂಖ್ಯೆ |
|---|---|---|---|---|---|---|---|
| | | | ಭಾರತೀಯರು | ವಿದೇಶಿಯರು | | | |
| 1 | ಮಂಗಳೂರು ನಗರ | 1114 | 1398 | 06 | 0 | 160 | 1244 |
| 2 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | 44 | 61 | 0 | 0 | 16 | 45 |
| 3 | ಉತ್ತರ ಕನ್ನಡ ಜಿಲ್ಲೆ, ಕಾರವಾರ | 87 | 137 | 0 | 0 | 51 | 86 |
| 4 | ಉಡುಪಿ ಜಿಲ್ಲೆ | 123 | 153 | 0 | 0 | 44 | 109 |
| | Total | **1368** | **1749** | **6** | **0** | **271** | **1484** |

## 2025

| ಕ್ರ. ಸಂ | ಘಟಕ | ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | | ದಸ್ತಗಿರಿಯಾದ ಉತ್ಪಾದಕರ ಸಂಖ್ಯೆ | ದಸ್ತಗಿರಿಯಾದ ಮಾರಾಟಗಾರರ ಸಂಖ್ಯೆ | ದಸ್ತಗಿರಿಯಾದ ವ್ಯಸನಿಗಳ ಸಂಖ್ಯೆ |
|---|---|---|---|---|---|---|---|
| | | | ಭಾರತೀಯರು | ವಿದೇಶಿಯರು | | | |
| 1 | ಮಂಗಳೂರು ನಗರ | 717 | 953 | 01 | 0 | 231 | 723 |
| 2 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | 29 | 51 | 0 | 0 | 31 | 20 |
| 3 | ಉತ್ತರ ಕನ್ನಡ ಜಿಲ್ಲೆ, ಕಾರವಾರ | 295 | 357 | 0 | 0 | 51 | 306 |
| 4 | ಉಡುಪಿ ಜಿಲ್ಲೆ | 177 | 223 | 0 | 0 | 58 | 165 |
| | Total | 1218 | 1584 | 1 | 0 | 371 | 1214 |

ರಾಯಚೂರು ಜಿಲ್ಲೆಯಲ್ಲಿ ಡ್ರಗ್ಸ್ ಪೆಡ್ಲರ್‌ಗಳು, ಡ್ರಗ್ಸ್ ಸರಬರಾಜು ಮಾಡುವವರ ವಿರುದ್ಧ ಎನ್.ಡಿ.ಪಿ.ಎಸ್ .ಕಾಯ್ದೆ-1985ರಡಿಯಲ್ಲಿ ನಿಯಮಾನುಸಾರ ಕ್ರಮಕೈಗೊಂಡು, ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ:-

## 2023 ರಿಂದ 2025

| ವರ್ಷ | ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | | ದಸ್ತಗಿರಿಯಾದ ಉತ್ಪಾದಕರ ಸಂಖ್ಯೆ | ದಸ್ತಗಿರಿಯಾದ ಮಾರಾಟಗಾರರ ಸಂಖ್ಯೆ | ದಸ್ತಗಿರಿಯಾದ ವ್ಯಸನಿಗಳ ಸಂಖ್ಯೆ |
|---|---|---|---|---|---|---|
| | | ಭಾರತೀಯರು | ವಿದೇಶಿಯರು | | | |
| 2023 | 17 | 21 | 0 | 0 | 25 | 0 |
| 2024 | 20 | 13 | 0 | 0 | 19 | 9 |
| 2025 | 82 | 17 | 0 | 0 | 28 | 74 |

ರಾಜ್ಯದಲ್ಲಿ ಎನ್.ಡಿ.ಪಿ.ಎಸ್ .ಕಾಯ್ದೆ-1985ರಡಿಯಲ್ಲಿ ದಾಖಲಾದ ಪ್ರಕರಣಗಳ ಮಾಹಿತಿ ಕೆಳಕಂಡಂತಿದೆ:-

| Year | Rep | Abated | Compounded | Convicted | Dis/Acq | False Case | OD | PT |
|---|---|---|---|---|---|---|---|---|
| 2023 | 6767 | 22 | 18 | 3696 | 101 | 16 | 21 | 2881 |
| 2024 | 4188 | 7 | 10 | 1886 | 29 | 11 | 11 | 2172 |
| 2025 | 6824 | 2 | 6 | 1332 | 5 | 29 | 2 | 3880 |
| Jan-2026 | 614 | 0 | 0 | 22 | 0 | 0 | 0 | 86 |
| TOTAL | 18393 | 31 | 34 | 6936 | 135 | 56 | 34 | 9019 |

ಕರ್ನಾಟಕ ರಾಜ್ಯಾದ್ಯಂತ ಕಳೆದ 03 ವರ್ಷಗಳಲ್ಲಿ ಡ್ರಗ್ಸ್ ಪೆಡ್ಲರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾದ ಮಾಹಿತಿ ಕೆಳಕಂಡಂತಿದೆ:-

| Year | Indian Peddlers | | | | Foreign Peddlers | | | |
|---|---|---|---|---|---|---|---|---|
| | Accused | Arrested | PIT NDPS | Externment | Accused | Arrested | PIT NDPS | Deported |
| 2023 | 3699 | 3428 | 2 | 26 | 106 | 99 | 0 | 0 |
| 2024 | 3248 | 3014 | 2 | 17 | 74 | 69 | 2 | 0 |
| 2025 | 4757 | 4416 | 13 | 50 | 67 | 62 | 1 | 0 |
| Total | 11704 | 10858 | 17 | 93 | 247 | 230 | 3 | 0 |

**ರಾಜ್ಯದಲ್ಲಿ ವಶಪಡಿಸಿಕೊಂಡ ಮಾದಕ ವಸ್ತುಗಳ ಪ್ರಮಾಣ ಮತ್ತು ಅದರ ಮೌಲ್ಯಗಳ ವಿವರ ಕೆಳಕಂಡಂತಿದೆ:-**

| Year | Drug Seized (in KG) | | | Drug Seized Value (Rs. In Crores) | | |
|---|---|---|---|---|---|---|
| | Ganja | Synthetic | Total | Ganja | Synthetic | Total |
| 2023 | 10630 | 145 | 10775 | 57.70 | 76.28 | 133.99 |
| 2024 | 6136 | 195 | 6331 | 47.16 | 215.25 | 262.42 |
| 2025 | 6219 | 871 | 7090 | 84.00 | 124.17 | 208.18 |
| Total | 22985 | 1211 | 24196 | 188.86 | 415.70 | 604.49 |

ರಾಜ್ಯದಲ್ಲಿ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ 2023 ರಲ್ಲಿ 82, 2024 ರಲ್ಲಿ 89 ಮತ್ತು 2025 ರಲ್ಲಿ 130 ವಿದ್ಯಾರ್ಥಿಗಳ ಮೇಲೆ ಕ್ರಮಕೈಗೊಳ್ಳಲಾಗಿರುತ್ತದೆ.

**ಕರಾವಳಿ ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಮಟ್ಕಾ ಹಾಗೂ ಇಸ್ಪೀಟು ದಂಧೆಯನ್ನು ತಡೆಗಟ್ಟಲು ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ:-**

| ಜಿಲ್ಲೆ | ಮಟ್ಕಾ | | | ಜೂಜಾಟ | | |
|---|---|---|---|---|---|---|
| | 2023 | 2024 | 2025 | 2023 | 2024 | 2025 |
| ಮಂಗಳೂರು ನಗರ | 98 | 145 | 78 | 50 | 68 | 52 |
| ದಕ್ಷಿಣ ಕನ್ನಡ | 10 | 7 | 7 | 18 | 12 | 15 |
| ಉಡುಪಿ | 112 | 25 | 55 | 80 | 91 | 67 |
| ಉತ್ತರ ಕನ್ನಡ | 361 | 272 | 432 | 111 | 72 | 133 |

**ರಾಯಚೂರು ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಇಸ್ಪೀಟು ದಂಧೆಯನ್ನು ತಡೆಯುವಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ:-**

| ವರ್ಷ | ದಾಖಲಾದ ಮಟ್ಕಾ ಪ್ರಕರಣಗಳ ಸಂಖ್ಯೆ | ದಾಖಲಾದ ಇಸ್ಪೀಟ್ ಪ್ರಕರಣಗಳ ಸಂಖ್ಯೆ | ದಾಖಲಾದ ಕಳ್ಳತನ ಪ್ರಕರಣಗಳ ಸಂಖ್ಯೆ |
|---|---|---|---|
| 2023 | 142 | 76 | 25174 |
| 2024 | 104 | 61 | 22834 |
| 2025 | 96 | 62 | 18765 |
| **ಒಟ್ಟು** | 342 | 199 | 66773 |

**ರಾಜ್ಯದಲ್ಲಿ ಇಸ್ಪೀಟು ಮತ್ತು ಮಟ್ಕಾ ವಿರುದ್ಧ ದಾಖಲಾದ ಪ್ರಕರಣಗಳ ಅಂಕಿ-ಅಂಶ ವಿವರ ಈ ಕೆಳಕಂಡಂತಿದೆ:-**

| ವರ್ಷ | ಇಸ್ಪೀಟ್ | ಮಟ್ಕಾ |
|---|---|---|
| 2023 | 7209 | 5933 |
| 2024 | 6634 | 5867 |
| 2025 | 7751 | 6531 |
| **ಒಟ್ಟು** | 21594 | 18331 |

**ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಮತ್ತು ಕರಾವಳಿ ಕರ್ನಾಟಕದಲ್ಲಿ ಡ್ರಗ್ಸ್ ಪೆಡ್ಲರ್‌ಗಳು ಮತ್ತು ಡ್ರಗ್ಸ್ ಸರಬರಾಜು ಮಾಡುವವರ ಕುರಿತು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-**

- ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ "ಮನೆ ಮನೆಗೆ ಪೊಲೀಸ್" ಕಾರ್ಯಕ್ರಮದಡಿ ಬೀಟ್ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ಮನೆ ಮನಗೆ ತೆರಳಿ, ಜನ ಸಂಪರ್ಕ ಸಭೆ ಹಾಗೂ ಹಿರಿಯ ನಾಗರೀಕರ ಸಭೆಯನ್ನು ನಡೆಸಿ ಅಪರಾಧಗಳು ನಡೆಯದಂತೆ ಅರಿವು ಮೂಡಿಸಲಾಗುತ್ತಿದೆ.
- ದರೋಡೆ, ರಾಬರಿ, ಸರಕಳವು ಮುಂತಾದ ಪ್ರಕರಣಗಳು ನಡೆದ ತಕ್ಷಣ ಆರೋಪಿತರನ್ನು ಸುತ್ತುವರೆದು ಹಿಡಿಯಲು ಪೊಲೀಸ್ ಠಾಣೆವಾರು ಮತ್ತು ಉಪ ವಿಭಾಗ ಮಟ್ಟದಲ್ಲಿ ವ್ಯಾಪ್ತಿ ಬಿಟ್ಟು ಹೊರ ಹೋಗದಂತೆ ತಕ್ಷಣ ಕಾರ್ಯ ಪ್ರವೃತ್ತರಾಗಿ ಎಲ್ಲಾ ಮಾರ್ಗಗಳನ್ನು ಸುತ್ತುವರೆದು ಆರೋಪಿಗಳನ್ನು ಪತ್ತೆ ಹಚ್ಚಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಠಾಣಾ ವ್ಯಾಪ್ತಿಯಲ್ಲಿರುವ ಜ್ಯೂವೆಲ್ಲರಿ ಅಂಗಡಿಗಳ ಪಟ್ಟಿಯನ್ನು ತಯಾರಿಸಿ, ಅಂಗಡಿ ಮಾಲೀಕರ ಸಭೆಯನ್ನು ಕರೆದು ಜ್ಯೂವೆಲ್ಲರಿ ಅಂಗಡಿಗಳಿಗೆ ಚಿನ್ನಾಭರಣಗಳನ್ನು ಮಾರಲು ಬರುವ ಸಂಶಯಾಸ್ಪದ ವ್ಯಕ್ತಿಗಳ ಕುರಿತು ಮಾಹಿತಿಯನ್ನು ನೀಡುವ ಕುರಿತು ಸೂಚನೆಯನ್ನು ನೀಡಲಾಗಿದೆ.
- ಠಾಣೆಗಳ ವ್ಯಾಪ್ತಿಯಲ್ಲಿ ಸೊತ್ತು ಕಳವು ಪ್ರಕರಣವನ್ನು ತಡೆಗಟ್ಟುವ ಸಲುವಾಗಿ ಠಾಣಾ ವ್ಯಾಪ್ತಿಯಲ್ಲಿ ಸಂಶಯಾಸ್ಪದ ವ್ಯಕ್ತಿಗಳು, ಅಲೆಮಾರಿ ಗ್ಯಾಂಗ್‌ಗಳು ಕಂಡು ಬಂದಲ್ಲಿ ಅಂಥಹವರನ್ನು ಅವರುಗಳ ಆಧಾರ್ ಕಾರ್ಡ್‌ಗಳ ವಿವರ ಹಾಗೂ ಫಿಂಗರ್ ಪ್ರಿಂಟ್ ಮೂಲಕ ಸದರಿ ವ್ಯಕ್ತಿಗಳ ಪೂರ್ವ ಚರಿತ್ರೆಗಳ ಪರಿಶೀಲನೆ ಮಾಡಲಾಗುತ್ತಿದೆ.
- ರಾತ್ರಿ ಗಸ್ತಿನ ಸಮಯದಲ್ಲಿ ಯಾರಾದರೂ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಅಂತಹವರನ್ನು ಠಾಣೆಗೆ ಕರೆತಂದು ಅವರ ಮೇಲೆ 109 ಸಿ.ಆರ್.ಪಿ.ಸಿ / 41(ಡಿ) ಸಿ.ಆರ್.ಪಿ.ಸಿ/ 96 ಕೆ.ಪಿ ಆಕ್ಟ್ ರಡಿಯಲ್ಲಿ ಪ್ರಕರಣವನ್ನು ದಾಖಲಿಸುವುದು.
- ಠಾಣಾ ವ್ಯಾಪ್ತಿಯಲ್ಲಿ ಲಾಡ್ಜ್/ಹೋಟೇಲ್‌ಗಳಿಗೆ ಸಂಬಂಧಪಟ್ಟ ಪೊಲೀಸ್ ನಿರೀಕ್ಷಕರುಗಳು ತಕ್ಷಣ ಭೇಟಿ ನೀಡಿ, ಲಾಡ್ಜ್‌ನಲ್ಲಿ ತಂಗಿರುವ ವ್ಯಕ್ತಿಗಳ ಬಗ್ಗೆ ನಿರಂತರ ಪರಿಶೀಲನೆಯನ್ನು ಮಾಡಲಾಗುತ್ತಿದೆ. ಠಾಣಾ ವ್ಯಾಪ್ತಿಯಲ್ಲಿರುವ ಹೊಟೇಲ್/ ಲಾಡ್ಜ್ ಗಳಲ್ಲಿ ತಂಗಿರುವ ವ್ಯಕ್ತಿಗಳ ಕುರಿತು ಮಾಹಿತಿ ಪರಿಶೀಲನೆ ಮಾಡಿ ಮೇಲ್ವಿಚಾರಣೆ ನೋಡಿಕೊಳ್ಳಲಾಗುತ್ತಿದೆ.
- ಠಾಣಾ ವ್ಯಾಪ್ತಿಯ ಮನೆಗಳಲ್ಲಿ ಸಾರ್ವಜನಿಕರು ಹೆಚ್ಚಿನ ದಿನಗಳು ಮನೆಗೆ ಬೀಗ ಹಾಕಿ ಹೋಗುವ ಸಮಯದಲ್ಲಿ ಸ್ಥಳೀಯ ಪೊಲೀಸ್ ಠಾಣೆಗಳಿಗೆ ಮಾಹಿತಿಯನ್ನು ನೀಡುವ ಕುರಿತು ಜಾಗೃತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕರು ಈ ಬಗ್ಗೆ ಮಾಹಿತಿಯನ್ನು ಠಾಣೆಗಳಿಗೆ ನೀಡುವ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗಿದೆ.
- ಪ್ರತಿ ಬೀಟ್ ಸಿಬ್ಬಂದಿಗಳು ತಮ್ಮ ತಮ್ಮ ಗಸ್ತಿನಲ್ಲಿ ಬರುವ ಒಂಟಿ ಮನೆ, ಹಿರಿಯ ನಾಗರೀಕರು ವಾಸ ಮಾಡುವ ಮನೆ, ಡೋರ್ ಲಾಕ್ ಹೌಸ್‌ಗಳ ಬಗ್ಗೆ ಕಾಲಕಾಲಕ್ಕೆ ಮಾಹಿತಿಯನ್ನು ಸಂಗ್ರಹಿಸಿ ಠಾಣೆಗೆ ನೀಡಲಾಗುತ್ತಿದೆ. ಈ ಬಗ್ಗೆ ಠಾಣೆಯಲ್ಲಿ ರಾತ್ರಿ ರೌಂಡ್ಸ್ ಹಾಗೂ ರಾತ್ರಿ ಗಸ್ತು ಕರ್ತವ್ಯಕ್ಕೆ ನೇಮಿಸಲಾದ ಸಿಬ್ಬಂದಿಗಳು ಸದರಿ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿ ನಿಗಾ ಇಡುತ್ತಿರುತ್ತಾರೆ.
- ಗಾಂಜಾ ಮತ್ತು ಇನ್ನಿತರ ಮಾದಕ ವಸ್ತುಗಳ ಜಾಲಕ್ಕೆ ವಿದ್ಯಾರ್ಥಿಗಳು, ಯುವಕರು ಬಲಿಯಾಗದಂತೆ ತಡೆಯುವ ಉದ್ದೇಶದಿಂದ ಎಲ್ಲಾ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಜಾಥಾ, ಬೀದಿ ನಾಟಕ ಮತ್ತು

ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಕರಪತ್ರಗಳನ್ನು ಹಂಚಿ, ಫ್ಲೆಕ್ಸ್, ಬ್ಯಾನರ್ ಅಳವಡಿಸಿ ಮಾಧ್ಯಮಗಳ ಮೂಲಕ ಪ್ರಚಾರ ಮಾಡಿ ಸಾರ್ವಜನಿಕರಲ್ಲಿ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕ್ರಮ ಕೈಗೊಳ್ಳಲಾಗಿದೆ.

- ರಾಜ್ಯದ ಮತ್ತು ಜಿಲ್ಲಾ ಗಡಿಗಳಲ್ಲಿ ನಾಕಾ ಬಂಧಿ ನಡೆಸಿ, ಚೆಕ್ ಪೋಸ್ಟ್ ಗಳನ್ನು ತೆರೆದು ಪರಿಶೀಲಿಸಲಾಗುತ್ತಿದೆ.
- ಮಾದಕ ದ್ರವ್ಯ ಮಾರಾಟ ಪ್ರಕರಣಗಳಲ್ಲಿ ಈ ಹಿಂದೆ ದಸ್ತಗಿರಿಯಾದ ಆರೋಪಿತರ ಮೇಲೆ ನಿಗಾ ಇಡಲಾಗಿದೆ.
- ಶಾಲಾ-ಕಾಲೇಜುಗಳಲ್ಲಿ ಮಾದಕ ವಸ್ತು ವಿರೋಧಿ ಸಮಿತಿಗಳ ರಚನೆ ಮಾಡಿ ಕಾಲೇಜುಗಳಲ್ಲಿ ಸ್ವಯಂ ಪ್ರೇರಿತ ಪರೀಕ್ಷೆ (Voluntary test) ನಡೆಸಲಾಗುತ್ತಿದೆ.
- ಅನಾಮಧೇಯ ಮಾಹಿತಿ ಮತ್ತು ವರದಿಗಾಗಿ ಕ್ಯೂಆರ್ ಕೋಡ್ ಅನ್ನು ರಚಿಸಿದ್ದು ಮತ್ತು ದೂರು ಬಂದ ತಕ್ಷಣವೇ ಕ್ರಮಕೈಗೊಳ್ಳಲಾಗುತ್ತಿದೆ.
- ಮಾದಕ ವಸ್ತು ಸೇವನೆ ಪ್ರಕರಣ ದಾಖಲಾಗಿರುವ ಆರೋಪಿತರಿಗೆ ಬೀಟ್ ಸಿಬ್ಬಂದಿಗಳನ್ನು ನೇಮಿಸಿ ಸಮಾಲೋಚನೆಗೆ ಒಳಪಡಿಸಲಾಗುತ್ತಿದೆ.
- ಮಾದಕ ವಸ್ತುಗಳ ವಿರುದ್ಧ ಎನ್.ಡಿ.ಪಿ.ಎಸ್. ಕಾಯ್ದೆ-1985ರಡಿಯಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗುತ್ತದೆ.
- ಡ್ರಗ್ ಪೆಡ್ಲರ್‌ಗಳ ಮೇಲೆ ನಿಗಾ ವಹಿಸಿದ್ದು, ಪುನರಾವರ್ತಿತ ಡ್ರಗ್ ಪೆಡ್ಲರ್‌ಗಳ ವಿರುದ್ಧ PITNDPS ಕಾಯ್ದೆ-1988ರಡಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ.
- ಕಾಲೇಜುಗಳಲ್ಲಿ "Anti-Drug and Awareness Committee" ಸಮಿತಿಯನ್ನು ರಚಿಸಲಾಗಿದ್ದು, ಪ್ರತಿ ತಿಂಗಳು ಕನಿಷ್ಠ 01 ಸಭೆಯನ್ನು ನಡೆಸಲು ಸೂಚಿಸಿ ಡ್ರಗ್ಸ್ ಪ್ರಕರಣಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ.
- ಡ್ರಗ್ಸ್ ಪ್ರಕರಣಗಳನ್ನು ಪತ್ತೆ ಮಾಡಲು ಪ್ರತಿ ತಿಂಗಳು ಜಿಲ್ಲಾ ಮಟ್ಟದ NCORD ಸಭೆಯನ್ನು ನಡೆಸಿ, ವಿವಿಧ ಇಲಾಖೆಗಳ ಅಧಿಕಾರಿ ಸಿಬ್ಬಂದಿಯವರ ಮುಖಾಂತರ ಡ್ರಗ್ಸ್ ಪ್ರಕರಣಗಳನ್ನು ಪತ್ತೆ ಮಾಡುವ ಕ್ರಮ ಕೈಗೊಳ್ಳಲಾಗಿದೆ.
- ಸನ್ಮಿತ್ರ ಉಪಕ್ರಮದ ಅಡಿಯಲ್ಲಿ ಪ್ರತಿ ಮಾದಕ ವ್ಯಸನಿಗೆ ಒಬ್ಬ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, ಮಾದಕ ವ್ಯಸನಿಯನ್ನು ವ್ಯಸನ ಮುಕ್ತರಾಗಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಒಇ 6 ಪಿಎನ್‌ಡಿ 2026 (ಇ)

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು